

## ಹೀಗೊಂದು ಭಾಷಾಂತರ

ಬ್ಯಾಂಕಿನ ಲೆಕ್ಕಪರಿಶೋಧಕನಾಗಿ ಕಾರ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ಒಮ್ಮೆ ನನಗೆ ಶ್ರೀಶೈಲದ ಮಲ್ಲಿಕಾರ್ಜುನನನ್ನು ಕಾಣುವ ಯೋಗ ಕೂಡಿಬಂತು. ಶ್ರೀಶೈಲವಿರುವುದು ಈಗಿನ ವಿಭಜಿತ ಆಂಧ್ರ ಪ್ರದೇಶದಲ್ಲಿ.

ದೇವರ ದರ್ಶನಕ್ಕೆ ಹೋಗುವ ಹಾದಿಯಲ್ಲಿ ನಮ್ಮ ಪಾದರಕ್ಷೆಗಳನ್ನು ತೆಗೆದಿಡಲು ಒಂದು ಪ್ರತ್ಯೇಕ ಸ್ಥಳ (ಕೊಠಡಿ) ಎಲ್ಲ ದೇವಸ್ಥಾನಗಳಲ್ಲಿರುವಂತೆ ಅಲ್ಲಿಯೂ ಇತ್ತು. ಪಾದರಕ್ಷೆಗಳನ್ನು ಕಳಚುತ್ತಿದ್ದ ನಾನು ಮೇಲ್ಗಡೆ ತೆಲುಗಿನಲ್ಲಿ ಬರೆದ 'ಇಕ್ಕಡ ಪಾದರಕ್ಷಲು ಭದ್ರಪರಚು ಸ್ಥಳಮು' ಎಂಬ ಬರಹವನ್ನು ಲೀಲಾಜಾಲವಾಗಿ ಓದಿದೆ. ಅಂದರೆ, ಇಲ್ಲಿ ಪಾದರಕ್ಷೆಗಳನ್ನು ಭದ್ರವಾಗಿ ಇಡುವ ಸ್ಥಳ ಎಂದರ್ಥ. ಅದರ ಕೆಳಗೆ ಕನ್ನಡ ಭಾಷಾಂತರವೂ ಇತ್ತು. ನೋಡಿದ ನನಗೆ ರೋಮಾಂಚನವಾಯಿತು. ಆಂಧ್ರ ನೆಲದಲ್ಲಿ ಕನ್ನಡ ಬರಹದ ಫಲಕ! ಅದು ಹೀಗಿತ್ತು:

'ಇಲಿ ಪಾದರಕ್ಷೆ ಪರಚುವ ಸ್ಥಳ.'

ಈ ಬರಹ ಓದಿ ಪಾದರಕ್ಷೆ ಬಿಡುವುದೋ ಬೇಡವೋ ಎನ್ನುವ ಗೊಂದಲದಲ್ಲಿ ಬಿದ್ದೆ!

**ಧರ್ಮಾನಂದ ಶಿರ್ವ, ಬೆಂಗಳೂರು**

## ಯಾವುದು ಎಡಗಾಲು?

ನನ್ನ ಆಪ್ತಮಿತ್ರ ಮಲ್ಲೇಶಿ, ಅಂದು ನನ್ನ ಜನ್ಮ ದಿನವೆಂದು ಹೇಗೋ ಪತ್ತೆ ಹಚ್ಚಿ, ಸಂಜೆಯಾಗುತ್ತಲೇ ನನ್ನ ಬಳಿ ಬಂದ. 'ನಡೆ! ಪಲ್ಲವಿ ಬಾರ್‌ಗೆ ಹೋಗೋಣ, ನಿನ್ನ ಹುಟ್ಟು ಹಬ್ಬವನ್ನು ನಾವಿಬ್ರೆ ಗ್ರಾಂಡಾಗಿ ಆಚರಿಸೋಣ!' ಎಂದು ಆಗ್ರಹಿಸಿದ. ಅವನು ಉತ್ಸಾಹದಿಂದ 'ಇವತ್ತು ಜಿನ್ ಟೇಸ್ಟ್ ನೋಡು! ಹ್ಯಾಗೆ ಕಿಕ್ ಕೊಡುತ್ತೆ!' ಅಂದ. ಲಿಂಬೆ ರಸ, ಐಸ್ ಬೆರೆಸಿಕೊಂಡು ಒಂದು ಬಾಟಲ್ ನಿಧಾನವಾಗಿ ಒಬ್ಬನೇ ಖಾಲಿ ಮಾಡಿದ! ರಾತ್ರಿ ಹತ್ತು ಗಂಟೆಯಾಯಿತು. 'ನಡೆ ಮನೆಗೆ ಹೋಗೋಣ' ಅಂದೆ. ಟೇಬಲ್ ಕೆಳಗೆ ಅಸ್ತ–ವ್ಯಸ್ತವಾಗಿ ಬಿದ್ದಿದ್ದ ಅವನ ಚಪ್ಪಲಿಗಳನ್ನು ಅವನ ಕಾಲ ಬಳಿ ತಳ್ಳಿದೆ. ಅವನು ಫುಲ್ ಟೈಟ್ ಆಗಿದ್ದ. ಎಡಗಾಲಿನ ಚಪ್ಪಲಿಯಲ್ಲಿ, ತನ್ನ ಬಲಗಾಲು ಸೇರಿಸಲಾರಂಭಿಸಿದ. 'ಇದು ಎಡಗಾಲಿನದು!' ಎಂದು ಅವನಿಗೆ ನೆನಪು ಮಾಡಿದೆ. 'ಸರಿ!, ಆದ್ರೆ ನನ್ನ ಎಡಗಾಲು ಯಾವುದು?!' ಎಂದು ಅವನು ತೂರಾಡುತ್ತಾ ಕೇಳಿದಾಗ, ನನ್ನ ನಶೆ ಪೂರಾ ಇಳಿದುಹೋಗಿತ್ತು!



**ಕೆ.ಜಿ. ಭದ್ರಣ್ಣವರ, ಮುದ್ದೇಬಿಹಾಳ**